ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ14-11-2025 ರಂದು ಬೊಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ 1 ರಿಂದ 8 ನೇ ಪ್ರತಿವಾದಿ ಪರ ಮಾನ್ಯ ಎ ಜಿ ಪಿ ರವರಿಂದಃ

2. ನಾನು ಎಸ್ ಎಸ್ ಎಲ್ ಸಿ ವರೆಗೆ ಶಿರಳಗಿ ಸರ್ಕಾರಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಂದೆ ಬದ್ರಯ್ಯ ಗೌಡ ನನ್ನೊಂದಿಗೆ ವಾಸವಿರುತ್ತಾರೆ. ನನ್ನ ತಂದೆಗೆ ನಾವು ಎರಡು ಜನ ಮಕ್ಕಳು ಇರುತ್ತೇವೆ. ಶಿವಲಿಂಗಪ್ಪ ಮುತ್ತಪ್ಪ ಗೌಡ ನನ್ನ ಅಜ್ಜ. ಸದರಿ ಶಿವಲಿಂಗಪ್ಪ ಮುತ್ತಪ್ಪ ಗೌಡರವರಿಗೆ ಒಟ್ಟು 5 ಜನ ಮಕ್ಕಳು ಇದ್ದು ಅವರುಗಳೆಂದರೆ 1. ಬಂಗಾರಮ್ಮ ಶಿವಲಿಂಗಪ್ಪ ಗೌಡ, 2. ರಾಜಶೇಖರ ಶಿವಲಿಂಗಪ್ಪ ಗೌಡ, 3. ಭದ್ರಯ್ಯ ಶಿವಲಿಂಗಪ್ಪ ಗೌಡ, 4. ಜಯಮ್ಮ ಶಿವಲಿಂಗಪ್ಪ ಗೌಡ, 5. ಗುರುವಯ್ಯ ಶಿವಲಿಂಗಪ್ಪ ಗೌಡ .

3. ನನ್ನ ತಂದೆ ಶಿರಳಗಿ ಗ್ರಾಮ ಪಂಚಾಯತದಲ್ಲಿ ಅಧ್ಯಕ್ಷರಾಗಲಿ ಸದಸ್ಯರಾಗಲಿ ಆಗಿರುವುದಿಲ್ಲ. 4. ದಾವಾಸ್ತಿ ನನ್ನ ತಂದೆಗೆ ವಿಭಾಗದಲ್ಲಿ ಬಂದಿತ್ತು ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

5. ದಾವಾಸ್ತಿ ನನ್ನ ತಂದೆಗೆ ನನ್ನ ಅಜ್ಜನ ಮೂಲಕ ಬಂದಿರುತ್ತದೆ. ದಾವಾ ಸರ್ವೆ ನಂ 336 ರಲ್ಲಿ ಒಟ್ಟು 9 ಎಕರೆ 27 ಗುಂಟೆ ವಿಸ್ತೀರ್ಣ ಇರುತ್ತದೆ. ದಾವಾ ಸರ್ವೆ ನಂ 336 ರಲ್ಲಿ ವಿಭಾಗದಲ್ಲಿ ಯಾರು ಯಾರಿಗೆ ಎಷ್ಟು ಎಷ್ಟು ಬಂದಿರುತ್ತದೆ ಎಂದು ನಾನು ದಾಖಲೆಯನ್ನು ಹಾಜರುಪಡಿಸಿರುತ್ತೇನೆ.

6. ನಾನು ಈಗ ಹಂಜಕ್ಕಿ, ಶಿರಳಗಿಯಲ್ಲಿ ವಾಸವಿರುತ್ತೇನೆ. ದಾವಾಸ್ತಿಯಲ್ಲಿ ಶಾಲೆ ಇರುವುದು ನನಗೆ ಬುದ್ದಿಬಂದಾಗಲಿನಿಂದ ತಿಳಿದಿರುತ್ತದೆ. ದಾವಾಸ್ತಿಯಲ್ಲಿ ಶಾಲೆ ಇರುವ ಬಗ್ಗೆ ನನಗೆ ಸುಮಾರು 15 ವರ್ಷಗಳಿಂದ ನನಗೆ ತಿಳಿದಿರುತ್ತದೆ. ದಾವಾಸ್ತಿಯಲ್ಲಿ ಶಾಲೆ ಇರುವ ಬಗ್ಗೆ ನನ್ನ ತಂದೆಯಾಗಲಿ ನನ್ನ ಕುಟುಂಬದ ಸದಸ್ಯರಾಗಲಿ ತಕರಾರು ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ.

7. 2004 ರಿಂದಲೂ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಹಂಜಕ್ಕಿ ಶಿರಳಗಿ ದಾವಾಸ್ತಿಯಲ್ಲಿ ಇದೆ ಎಂದರೆ ಸರಿಯಲ್ಲ.

8. ನನ್ನ ಅಜ್ಜ ಶಿವಲಿಂಗಪ್ಪ ಮುತ್ತಣ್ಣ ಗೌಡ ರವರು ಹಾಗೂ ಗಿರಿಜಾ, ರಾಜಶೇಖರ್ , ಶಿವಲಿಂಗಪ್ಪ , ಬಿ ಎಸ್ ಗೌಡ , ಗುರುವಯ್ಯ ರವರು ದಾವಾ ಸರ್ವೆ ನಂ 336/1 ರಲ್ಲಿ 3.5 ಗುಂಟೆ ಕ್ಷೇತ್ರವನ್ನು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಹಂಜಕ್ಕಿ ಶಿರಳಗಿ ರವರಿಗೆ ಲಿಖಿತ ದಾನಪತ್ರದ ಮೂಲಕ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಶಿವಲಿಂಗಯ್ಯ ಗೌಡ ಮತ್ತು ಅವರ

ಕುಟುಂಬದವರು ದಾವಾಸ್ತಿಯನ್ನು ದಾವಾ ಸರ್ವೆ ನಂ 336/1 ರಲ್ಲಿ 3.5 ಗುಂಟೆಯನ್ನು ಪ್ರತ್ಯೇಕವಾಗಿ ವಿಭಾಗ ಮಾಡಿ ರೆಜಿಸ್ಟರ್ ಮಾಡಿ ಕೊಡಲು ಸಾಧ್ಯವಾಗದೇ ಇರುವ ಕಾರಣ ಲಿಖಿತ ದಾನ ಪತ್ರವನ್ನು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಹಂಜಕ್ಕಿ ಶಿರಳಗಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

9. 2004 ರಲ್ಲಿ ದಾವಾ ಸರ್ವೆ ನಂ 336/1 ರಲ್ಲಿ 3.5 ಗುಂಟೆಗೆ ಜಮೀನಿಗೆ ಸಂಬಂದಿಸಿದಂತೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಹಂಜಕ್ಕಿ ಶಿರಳಗಿ ಶಾಲಾ ಮುಖ್ಯೊಪಾದ್ಯಾಯರು ಶಿವಲಿಂಗಯ್ಯ ಗೌಡ ಹಾಗೂ ಅವರ ಕುಟುಂಬದವರಿಗೆ ಸದರಿ ಆಸ್ತಿಯನ್ನು ನೊಂದಣಿ ಮಾಡಿಕೊಡುವಂತೆ ಪತ್ರ ಬರೆದಿದ್ದರು ಎಂದರೆ ಸರಿಯಲ್ಲ.

10. ದಾವಾಸ್ತಿಯನ್ನು ದಿಃ 29-09-2023 ರಂದು ಸರ್ವೆ ಮಾಡಿಸಿರುತ್ತೇನೆ. ದಾವಾಸ್ತಿಯ ಸರ್ವೆಗೆ ಸಂಬಂದಿಸಿದಂತೆ ದಾವಾಸ್ತಿಯ ಸುತ್ತಮುತ್ತಲು ಇರುವರಿಗೆ ನೋಟೀಸ್ ನೀಡಿರುತ್ತೇವೆ. ದಾವಾಸ್ತಿಯ ಸರ್ವೆ ಕಾಲಕ್ಕೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಹಂಜಕ್ಕಿ ಶಿರಳಗಿ ಶಾಲೆಗೆ ಸಂಬಂದಿಸಿದಂತೆ ನಾನು ಯಾವುದೇ ನೋಟೀಸ್ ನೀಡಿಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ಎಜಿಪಿರವರು ಮುಂದುವರೆದ ಪಾಟಿಸವಾಲಿಗೆ ಸಮಯವನ್ನು ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ**

**ಸಿವಿಲ್ ನ್ಯಾಯಾಧೀಶರು ಸಿದ್ದಾಪುರ**